ಕಥೆ

# ಶಿಥಿಲ ಶಿಲೆಗಳ ವೀಕ್ಷಕರು



**ಗೌತಮ ಜ್ಯೋತ್ಸ್ನ**

ಕಲೆ: ವಿ.ಎಂ. ಮಂಜುನಾಥ್

ದೊಡ್ಡ ಕುಳ ಬಂಡವಾಳಶಾಹಿ ಪರ್ವತನೇನಿಯವರ ಚಿಕ್ಕಪ್ಪನ ಮಗ ನಾನು ಓದಿದ್ದ ಊರಾದ ಕೆರ್ವಾಜೆಯ ಪಾಳು ಬಿದ್ದ ಲಂಟಾನ ಕಾಡು ಭೂಮಿಯಲ್ಲಿ ಖಾಸಗಿ ಮೃಗಾಲಯವನ್ನು ನಿರ್ಮಿಸುವ ಪ್ಲ್ಯಾನ್ ಮಾಡದೇ ಇದ್ದರೆ ನಾನು ಆ ಬರಡು ಬಿದ್ದ ನೆಲಕ್ಕೆ ಅಂಟಿಕೊಂಡಿದ್ದ ಪುರಾತನ ಆರ್ಕಿಯಾಲಜಿ ಡಿಪಾರ್ಟ್‌ಮೆಂಟಿನ ಅಸ್ತಿತ್ವದ ಬಗ್ಗೆ ಗಮನ ಹರಿಸುತ್ತಲೇ ಇರಲಿಲ್ಲ. ಮೂವತ್ತೆಂಟು ವರುಷದ ನಿರುದ್ಯೋಗಿ, ಕುಡಿಯುವ ಚಟವಿರುವ ಡಿವೋರ್ಸಿಯಾದ ನನಗೆ 'ಕ್ರಿಸ್ತಪೂರ್ವ'ದಲ್ಲಿ ಸಿಕ್ಕಿದ್ದ ಜರ್ನಲಿಸಮ್ಮು ಡಿಗ್ರಿ ಸರ್ಟಿಫಿಕೇಟ್ ತಾತ್ಕಾಲಿಕವಾಗಿ ಆದರೂ ಸ್ವರ್ಗ ಸದೃಶವಾಗಿತ್ತು. ಕಪ್ಪು ಮತ್ತು ಬಿಳಿಯ ರಂಗಿನಲ್ಲಿ ಜಿನುಗುಡುತ್ತಿದ್ದ 'ಕ್ರೈಮ್ ಆಂಡ್ ಸ್ಟೈಲ್' ಅನ್ನೋ ಪಲ್ಪೀ ಲೋಕಲ್ ವಾರಪತ್ರಿಕೆಯ ಹಂಗಾಮಿ ನ್ಯೂಸ್ ಕರೆಸ್ಪಾಂಡೆಂಟ್ ಆಗಿ ದುಡಿಯುವ ಅವಕಾಶ ದಕ್ಕಿದ್ದೇ ನನಗೆ ಇದರಿಂದ. ನನ್ನ ಅದೃಷ್ಟ! ಆಲ್ಕೋಹಾಲಲ್ಲೇ ಮುಳುಗಿ ಇರುವ, ಹೆಂಡತಿಯೂ ಬಿಟ್ಟು ನಡೆದಿರುವ, ಇನ್ನೂ ಮುದುಕನೂ ಆಗದೇ ಅತ್ತ ಹೊಸ ಬದುಕನ್ನು ಮತ್ತೆ ಕಟ್ಟಿಕೊಳ್ಳಲು ತಾಕತ್ತೂ ಇರದ ನನ್ನಂಥವನಿಗೆ ಇಷ್ಟಾದರೂ ಪ್ರಾಪ್ತಿಯಾಯಿತಲ್ಲ... 'ತಿಂಗ್ಳಿಗೆ ಹತ್ತು ಸಾವಿರ ಸಿಗುತ್ತೆ ಒಳ್ಳೊಳ್ಳೆ ನ್ಯೂಸ್ ಸ್ಟೋರಿ ತಂದ್ರೆ' ಅಂತ ನಮ್ಮ ಎಡಿಟರ್ ಶಾಸ್ತ್ರಿ ಪ್ರಾಮಿಸ್ ಮಾಡಿದ್ದ. ಮಂಗಳೂರಿಂದ ಅರವತ್ತು ಕಿಲೋಮೀಟರ್ ದೂರದಲ್ಲಿದ್ದ ಕೆರ್ವಾಜೆಯಲ್ಲಿ ಈಗ ಆಂಧ್ರ ಮೂಲದ ಉದ್ಯಮಿಯ ಪ್ರೈವೇಟ್ ಹೈಟೆಕ್ ಝೂ ಗಾರ್ಡನ್ ಆಗುತ್ತೇ ಅನ್ನೋ ಸುದ್ದಿ ಹಬ್ಬುತ್ತಿದ್ದಂತೆ, ಆಗಷ್ಟೇ ಸೇವೆಗೆ ಹಾಜರಾಗಿದ್ದ ನನ್ನ ಕಿವಿ ಚುರುಕಾಗಿ ಆ ಸ್ಥಳಪುರಾಣದ ಮೇಲೆ ಕಣ್ಣಾಡಿಸೋಣ ಅಂತ ಗೂಗಲ್ ಮಾಡಿದಾಗ, ಈ ಆರ್ಕಿಯಾಲಜಿ ಡಿಪಾರ್ಟ್‌ಮೆಂಟು ಕಣ್ಣಿಗೆ ಬಿತ್ತು. ಅರರೇ! ಇದು ನನ್ನ ಸ್ಮೃತಿ ಪಟಲದಿಂದಲೇ ಅಳಿಸಿಹೋಗಿತ್ತಲ್ಲ ಅಂತ ಒಳ್ಳೇ ಹುಕಿಯಲ್ಲಿ ಹೀಗೆ ಆ ಆಫೀಸಿನ ಬಗ್ಗೆ ಇನ್ನೂ ಮಾಹಿತಿ ಸಂಗ್ರಹಿಸಲು ತಡಕಾಡುತ್ತಿರುವಾಗ, ಇಲ್ಲಿನ ಯುನಿಟ್ ಹೆಡ್ ಬಲರಾಮ್ ನಾಯ್ಡು ಇತ್ತೀಚೆಗೆ ಹೇಳ ಹೆಸರಿಲ್ಲದೆ ನಾಪತ್ತೆ ಆದ ಸುದ್ದಿ ಕೆಲ ಪ್ರಾದೇಶಿಕ ವೆಬ್ ಪತ್ರಿಕೆಗಳಲ್ಲಿ ಪ್ರಕಟವಾಗಿದ್ದು ನನ್ನ ಕುತೂಹಲವನ್ನು ಕೆಣಕಿತು.

ನಮ್ಮ ಎಡಿಟರ್‌ಗೆ ಈ ಪತ್ತೇದಾರಿ